ಓ ಎಸ್ ನಂ.31/2023
ಡಿ.ಡಬ್ಲ್ಯೂ-2 ವಿಲಾಸ ತಂದೆ ಗುರುನಾಥ ಅಂಬೂರೆ

**(ಇಂದು ದಿನಾಂಕಃ 19-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಕೆ ಪಿ ವಕೀಲರಿಂದ.

ದಾವಾ ಜಮೀನುಗಳು ನಮ್ಮ ತಂದೆಯಿಂದ ಬಂದಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ತಾಯಿಯಿಂದ ಬಂದಿರುತ್ತವೆ ಎನ್ನುತ್ತಾರೆ. ನಮ್ಮ ತಾಯಿಯಾದ ತಾನುಬಾಯಿರವರು ಈಗ ಮೃತರಾಗಿರುತ್ತಾರೆ. ದಾವಾ ಆಸ್ತಿಗಳು ನಮ್ಮ ಅಂಬೂರೆ ಕುಟುಂಬದಿಂದ ಬಂದಿವೆ ಎಂದರೆ ಸರಿ. ಗುರುನಾಥ ಮತ್ತು ತಾನುಬಾಯಿರವರಿಗೆ ನಾನು, ಪ್ರಮೀಳಾ, ನಳಿನಿ, ಮಂಗಲ ಮತ್ತು ರಾಜೇಶ ಎಂಬ ೫ ಜನ ಮಕ್ಕಳಿರುತ್ತೇವೆ ಎಂದರೆ ಸರಿ. ಕೃಷ್ಣಾಬಾಯಿ ಗಂಡ ರಾಮದಾಸರವರು ನಮ್ಮ ತಂದೆಯ ತಾಯಿಯಾಗಿರುತ್ತಾರೆ. ರಾಮದಾಸರವರಿಗೆ ಗುರುನಾಥ ಮತ್ತು ಸ್ವಾಮಿನಾಥರವರು ಮಕ್ಕಳು ಎಂದರೆ ಸರಿ. ಸಾಕ್ಷಿಯು ಜಗನ್ನಾಥ ಎಂಬುವವರೂ ಕೂಡಾ ರಾಮದಾಸರವರ ಮಗನಾಗಿರುತ್ತಾರೆ ಎನ್ನುತ್ತಾರೆ. ಸರ್ವೆ ನಂಬರ ೬೬೩ ರಲ್ಲಿ ೧ ಎಕರೆ ೬ ಗುಂಟೆ ದಾವಾ ಜಮೀನು ಮೊದಲು ಗುರುನಾಥರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಗುರುನಾಥ ನಮ್ಮ ತಂದೆ ಎಂದರೆ ಸರಿ. ನಾನು ಮತ್ತು ವಾದಿ ಖಾಸಾ ಅಣ್ಣ-ತಮ್ಮಂದಿರು ಎಂದರೆ ಸರಿ.

೨. ನಮ್ಮ ಹಿರಿಯರಿಂದ ಕೇವಲ ೨ ಎಕರೆ ಜಮೀನು ಮಾತ್ರ ನಮಗೆ ಬಂದಿರುತ್ತದೆ. ನಾನು ಆ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಮ್ಮ ನಡುವೆ ವಿಭಾಗ ಆದ ಕುರಿತು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಪಹಣಿಯಲ್ಲಿ ಬರೆಯಲಾಗಿದೆ ಎನ್ನುತ್ತಾರೆ. ವಿಭಾಗ

ಆಗಿದೆ ಎಂದು ತೋರಿಸಲು ಪಹಣಿಯನ್ನು ಬಿಟ್ಟು ಬೇರೆ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ಪ್ರಮೀಳಾ, ನಳಿನಿ ಮತ್ತು ಮಂಗಳ ನನ್ನ ಸಹೋದರಿಯರು ಎಂದರೆ ಸರಿ. ಸಾಕ್ಷಿಯು ಪ್ರಮೀಳಾ ಮೃತಳಾಗಿರುತ್ತಾಳೆ ಎನ್ನುತ್ತಾರೆ. ದಿನೇಶ ಮತ್ತು ದೀಪ್ತಿ ಪ್ರಮೀಳಾರವರ ಮಕ್ಕಳು ಎಂದರೆ ಸರಿ. ನನ್ನ ಸಹೋದರಿಯರಿಗೆ ಆಸ್ತಿಯಲ್ಲಿ ಪಾಲು ನೀಡಿರುವುದಿಲ್ಲ. ಅವರಿಗೂ ಕೂಡಾ ಆಸ್ತಿಯಲ್ಲಿ ಪಾಲು ಇರುತ್ತದೆ ಎಂದರೆ ಸಾಕ್ಷಿಯು ನಳಿನಿರವರಿಗೆ ೩ ತೊಲೆ ಬಂಗಾರ ನೀಡಿರುತ್ತೇನೆ ಎನ್ನುತ್ತಾರೆ. ಸದರಿ ಬಂಗಾರ ನಮ್ಮ ತಾಯಿಯದು ಇತ್ತು ಅದನ್ನು ನಳಿನಿರವರಿಗೆ ನೀಡಿರುತ್ತೇವೆ.

೩. ನಾವು ಮಂಗಳ ಮತ್ತು ಪ್ರಮೀಳಾರವರ ಮಕ್ಕಳಿಗೆ ಆಸ್ತಿಯಲ್ಲಿ ಯಾವುದೆ ಪಾಲು ನೀಡಿರುವುದಿಲ್ಲ. ನಾನು ಹೇಳಿದ ವಿಭಾಗ ೨೦೧೯ ರಲ್ಲಿ ನನ್ನ ತಾಯಿ ಜೀವಿತಾ ಇರುವಾಗ ಆಗಿರುತ್ತದೆ. ೨೦೨೨ ರಲ್ಲಿ ನಮ್ಮ ತಾಯಿರವರು ಮೃತರಾಗಿರುತ್ತಾರೆ. ನಮ್ಮ ತಂದೆ ೨೦೧೬ ರಲ್ಲಿ ಮೃತರಾಗಿರುತ್ತಾರೆ. ನಮ್ಮ ತಂದೆ ಜಮೀನನ್ನು ನನಗೆ ನೋಡಿಕೊಳ್ಳಲು ಹೇಳಿರುತ್ತಾರೆ ಮತ್ತು ಮುಂಬೈನಲ್ಲಿರುವ ಮನೆಯನ್ನು ವಾದಿಗೆ ನೀಡಿರುತ್ತಾರೆ. ನಾನು ಮುಂಬೈನಲ್ಲಿರುವ ಮನೆಯ ಕುರಿತು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅಫಜಲಪೂರದಲ್ಲಿ ೪೦ ಇಂಟು ೬೦ ಜಾಗೆ ಕೂಡಾ ನಮಗೆ ಇದೆ ಎಂದರೆ ಸರಿ. ಸದರಿ ಜಾಗೆಯಲ್ಲಿ ಪತ್ರಾಸನಿಂದ ಮಾಡಿದ ೩ ಕೋಣೆ ಮತ್ತು ಅಂಗಡಿ ಇರುತ್ತವೆ ಎಂದರೆ ಸರಿ. ಸದರಿ ಜಾಗೆ ಈಗಲೂ ನಮ್ಮ ತಂದೆಯ ಹೆಸರಿನಲ್ಲಿ ಇರುತ್ತದೆ. ಅದರಲ್ಲಿ ಖಾಯಂ ಆಗಿ ಯಾರೂ ವಾಸ ಇರುವುದಿಲ್ಲ.

೪. ನಾನು ಈಗ ಮುಂಬೈನಲ್ಲಿ ವಾಸವಾಗಿರುತ್ತೇನೆ. ನಾನು ಈಗ ಯಾವುದೆ ಕೆಲಸ ಮಾಡುತ್ತಿಲ್ಲ. ಮೊದಲು ಫುಟಪಾತನಲ್ಲಿ ಮಕ್ಕಳ ಬಟ್ಟೆ ಮಾರಾಟ ಮಾಡುತ್ತಿದ್ದೆ. ನನ್ನ

ಹೆಂಡತಿ ಮಕ್ಕಳು ಮುಂಬೈನಲ್ಲಿಯೆ ಇರುತ್ತಾರೆ ಎಂದರೆ ಸರಿ. ಜಮೀನುಗಳನ್ನು ಸಾಗುವಳಿ ಮಾಡಲು ಅರವಿಂದ ಅಂಬೂರೆ ಎನ್ನುವವರಿಗೆ ನೀಡಿರುತ್ತೇವೆ. ನಾನು ಹೇಳಿದಂತೆ ಬಂಗಾರವನ್ನು ನನ್ನ ಸಹೋದರಿಗೆ ನೀಡಿದ ಕುರಿತು ಯಾವುದೆ ದಾಖಲೆ ಇರುವುದಿಲ್ಲ. ನಾನು ವಾದಿಗೆ ಮತ್ತು ನನ್ನ ಸಹೋದರಿಯರಿಗೆ ಪಾಲು ನೀಡಿದ ಕುರಿತು ಯಾವುದೆ ಲಿಖಿತವಾದ ಪತ್ರವನ್ನು ಪಡೆದುಕೊಂಡಿರುವುದಿಲ್ಲ. ವಿಭಾಗವಾದ ಕುರಿತು ತಿಳಿಸಿ, ಅದರಂತೆ ಹೆಸರು ದಾಖಲಿಸಲು ತಹಶೀಲ್ದಾರ ಕಛೇರಿಗೆ ನಾನು ಯಾವುದೆ ಅರ್ಜಿ ನೀಡಿರುವುದಿಲ್ಲ. ವಿಭಾಗದ ಕುರಿತು ನೋಂದಣಿ ಕಛೇರಿಯಲ್ಲಿ ನೋಂದಣಿ ಮಾಡಿಸಿರುವುದಿಲ್ಲ. ಮುಟೇಷನ್ ದಾಖಲೆಗೆ ವಾದಿ ಮತ್ತು ನನ್ನ ಸಹೋದರಿಯರ ಸಹಿಗಳನ್ನು ಪಡೆದಿರುವುದಿಲ್ಲ.

೫. ನನ್ನ ಸಹೋದರಿಯರು ಸಹಿ ಮಾಡಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ವಿಭಾಗದ ಕುರಿತು ನಮ್ಮ ನಡುವೆ ಯಾವುದೆ ಲಿಖಿತ ದಾಖಲೆ ಪತ್ರ ಆಗಿರುವುದಿಲ್ಲ. ದಾವಾ ಆಸ್ತಿಗಳಲ್ಲಿ ಎಲ್ಲ ಮಕ್ಕಳ ಹಕ್ಕು ಇರುತ್ತದೆ ಎಂದರೆ ಸರಿ.

೬. ನನ್ನ ತಾಯಿಯ ಆಸೆಯಂತೆ ನನ್ನ ಮಗನ ಹೆಸರಿನಲ್ಲಿ ಜಮೀನು ಮಾಡಲಾಗಿರುತ್ತದೆ. ಆ ರೀತಿ ನನ್ನ ಮಗನ ಹೆಸರಿನಲ್ಲಿ ಜಮೀನು ಮಾಡುವಂತೆ ನಾನು ಯಾವುದೆ ಅರ್ಜಿ ಕಂದಾಯಾಧಿಕಾರಿಗಳಿಗೆ ನೀಡಿರುವುದಿಲ್ಲ. ನನ್ನ ತಾಯಿ ಕೂಡಾ ಆ ರೀತಿ ಯಾವುದೆ ಅರ್ಜಿ ನೀಡಿರುವುದಿಲ್ಲ. ಆಸ್ತಿಗಳಲ್ಲಿ ಎಲ್ಲರಿಗೂ ಪಾಲು ಕಾನೂನಿನ ಪ್ರಕಾರ ಆಗಬೇಕು ಎಂದರೆ ಸರಿ. ಸಾಕ್ಷಿಯು ಮಂಗಳ ಮತ್ತು ನಳಿನಿರವರ ಗಂಡಂದಿರು ಸಾಕಷ್ಟು ಶ್ರೀಮಂತರಾಗಿರುತ್ತಾರೆ, ನಾನು ಬಡವನಾಗಿರುತ್ತೇನೆ ಎನ್ನುತ್ತಾರೆ. ಮುಂಬೈನಲ್ಲಿ ೧೮೦ ಚದರಡಿ ಕೋಣೆ ನನಗೆ ಇರುತ್ತದೆ. ಸದರಿ ಕೋಣೆ ಅಪಾರ್ಟಮೆಂಟನಲ್ಲಿ ಇರುತ್ತದೆ. ಸದರಿ ಕೋಣೆಯ ಬೆಲೆ ಈಗ

ಸುಮಾರು ೬೦ ರಿಂದ ೭೦ ಲಕ್ಷ ಇರಬಹುದು. ವಾದಿ ರಾಜೇಶ ಕೂಡಾ ಪುಟಪಾತನಲ್ಲಿ ಮಕ್ಕಳ ಬಟ್ಟೆ ವ್ಯಾಪಾರ ಮಾಡುತ್ತಾರೆ. ಅರವಿಂದ ಅಂಬೂರೆರವರು ಜಮೀನಿನಲ್ಲಿನ ಖರ್ಚು ಮತ್ತು ಆದಾಯ ನನಗೆ ಹೇಳುತ್ತಿದ್ದರು ಮತ್ತು ನೀಡುತ್ತಿದ್ದರು. ಸಾಕ್ಷಿಯು ಕಳೆದ ೧ ವರ್ಷದಿಂದ ಯಾವುದೆ ಆದಾಯ ನೀಡಿಲ್ಲ ಎನ್ನುತ್ತಾರೆ. ನಾನು ನನ್ನ ಸಹೋದರ ಮತ್ತು ಸಹೋದರಿಯರಿಗೆ ಪಾಲು ನೀಡಬಾರದು ಎಂಬ ಉದ್ದೇಶದಿಂದ ಒಂದು ಸುಳ್ಳು ಪ್ರತಿವಾದ ಪತ್ರ ಮತ್ತು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಬಂಗಾರ ನೀಡಿದ ಕುರಿತು ಬರೆಯಲಾಗಿದೆ ಎನ್ನುತ್ತಾರೆ.

ಪಾಟೀ ಸವಾಲು: ೩ ರಿಂದ ೫ನೇ ಪ್ರತಿವಾದಿ ಪರ ವಕೀಲರು, ವಾದಿಪರ ವಕೀಲರು ಮಾಡಿದ ಪಾಟೀ ಸವಾಲನ್ನೆ ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.